Regd No M 1299 Sri ಶಾ॥ 30—10—51

SATYAVADI = 35th Year

ಸತ್ಯವಾದಿ

ಸಾ॥ಪಕರು- ಅರಮನೆ ಸಿರಸ್ತೆದಾರ್ ಎಂ. ವಿ ಸುಬ್ರಾಯಂಡು | ಬಿಡಿ ಪ್ರತಿ 3 ಪೈ

ಸೋಕರ್ನೊ ಕೊಲೆ ಯತ್ನ — ಇಂಡೋನೇಷಿಯ ರಾಷ್ಟ್ರಪತಿ ಸೋಕರ್ನೊ ಕೊಲೆ ಯತ್ನ ವಿದೇಶಿ ಕೈವಾಡದಿಂದ ನಡೆದುದು ಪತ್ತೆಯಾಯಿತೆಂದು ಇಂಡೋನೇಷಿಯ ಪಾರ್ಲಿಮೆಂಟ್ನಲ್ಲಿ ಪ್ರಧಾನಿ ಸಕಿಮುಕ್ ಹೇಳಿದ್ದಾರೆ.

ಕಾಂಗ್ರೆಸಿಗೆ ಸೋಲು ಮಹಾಜನಾವಣೆ ನ್ಯಾಯಾವಾಗಿ ನಡೆದರೆ ಕಾಂಗ್ರೆಸಿಗೆ ಸೋಲಾಗುವದೆಂದು ಅರುಣ ಅಸಫಾಲಿ ಹೇಳಿಕೆ

ಬಿಕ್ಕಟ್ಟು ಬಂತು — ಎಂಡು ವಿರೋಧ ಪಕ್ಷಗಳ ವಿಧ್ವಂಸಗೆರೆ ಎಲ್ಲಿರಲಂಬ ಒಗೆಗೆ ವಿಶ್ವಸಂಸ್ಥೆ ಹಾಗೂ ಕೊರಿಯ ಕಮ್ಯುನಿಸ್ಟ್ ಸಂಧಾನಕಾರರಲ್ಲಿ ಬಿಕ್ಕಟ್ಟುಂಟಾಗಿದೆ

ಕಾಂಗ್ರೆಸಿಗರ ಅರ್ಜಿಗಳು — ನಾಲ್ಕು ಸಾವಿರ ಚಿನ್ನವಣಾ ಸ್ಥಳಗಳಿಗೆ ಕಾಂಗ್ರೆಸಿಗಂದ ಬಂದಿರುವ ಒಟ್ಟು ಅರ್ಜಿ 35 ಸಾವಿರ.

ಅಪೇರ— ಕೀರ್ತಿಯುತ 5 ನೇ ವಾರ

ನವಾರ್ಧಿಕಾರಿ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಾಂದ್ರ್, ಸಂಬಿಯಾರ್

ಮನೋನ್ನತ ತಮಿಳು ಚಿತ್ರ. ಪ್ರತಿ ದಿನ 3 ಆಟಗಳು

ರಣಜಿತ್ 26—10—51 ರಿಂದ

ವಿನೋದನ ಹಿಂದಿ ಚಿತ್ರ ಪ್ರತಿ ದಿನ 3 ಆಟಗಳು

ನೌಜವಾನ್ Naujavn

ಪಾತ್ರ— ಸಲಿನಿ ಜಯವಂತ್, ಪ್ರೇಮನಾಥ್

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕಿನ ಪಟ್ಟಿಗಳು,

ಮೈಸೂರು

- ದುಂಡು,
- ಚೌಕೋನ,
- ಸರಳುಗಳು,
- ಮೂಲೆಗಂಬಗಳು
- ಬೇಲುಕಟ್ಟುಗಳು

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ,

ಭದ್ರಾವತಿ.

ಮಹಾ ಚುನಾವಣೆಯಲ್ಲಿ ಕಮ್ಯುನಿಸ್ಟರೊಡನೆ ಸಹಕಾರ

ಶಿವಮೊಗ್ಗ

ಆದರ್ಶ ಕಾಂಗ್ರೆಸಿಗ!

ಆಂಧ್ರ ಪ್ರದೇಶ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ನೆಲ್ಲೂರು ಜಿಲ್ಲೆಗೆ ವಿ. ಕೋದಂಡರಾವ ರೆಡ್ಡಿ ಎಂಬವನ್ನು ಪಾರ್ಲಿಮೆಂಟಿಗೆ ಹುರಿಯಾಳನ್ನಾಗಿ ಆರಿಸಿದ್ದಾರೆ ಇವನು ಸುಳ್ಳು ಸಾಕ್ಷಿ ಹೇಳಿ ನ್ಯಾಯಾಲಯದಲ್ಲಿ ಕಂಡವನ್ ನಾಡಲ್ಪಟ್ಟ ವ್ಯಕ್ತಿ!

ನವೆಂಬರ್ 1 ನೇ ತಾ॥ ಮಾದರಿ ಶಾಲೆಯಲ್ಲಿ ಸಂಜೆ 5 ಗಂಟೆಗೆ ವೈಸೂರು ನಗರದ ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರ ಸಂಘದ ಪುನರುಜ್ಜೀವನಕ್ಕಾಗಿ ಸಭೆ ಸೇರುವದು. ಇದು ಯಶಸ್ವಿಯಾಗಲು ಮಾಧ್ಯಮಿಕ ಶಾಲಾ ಉಪಾಧ್ಯಾಯರೆಲ್ಲರೂ ಸಹಕರಿಸಬೇಕೆಂದು ಶ್ರೀ ಎ. ಎಸ್. ನರಸಿಂಹಾಚಾರ್ ರವರು ಪ್ರಾರ್ಥಿಸುತ್ತಾರೆ

ಕನರ್ಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಸೇವಿಂಗ್ಸ್ ಡಿಪಾಜಿಟ್ ವಾಲ್ಟನ್ನು ಕಲೆಕ್ಟರಾದ ಶ್ರೀ ರಾಜರತ್ನಂ ರವರು ಉದ್ಘಾಟಿಸಿದರು. ಸರ್ಕಾರದ ಅಧಿಕಾರಿಗಳು ತಾವಾದ್ದರಿಂದ ಬೆಳೆಯ ಬೀಗದಕೈ ತಾವು ಸ್ವೀಕರಿಸುವುದಿಲ್ಲವೆಂದು ಅಲ್ಲೇ ಬಿಟ್ಟರು

ಗಜಂತಿನ ಕ್ಷಾಮಪೀಡಿತ ಜನರ ಪರಿಹಾರಕ್ಕೆಂದು ಆರು ಕೋಟಿ ರೂ. ಗಳ ವೆಚ್ಚ ನಡೆಯಿಲಿದೆ.

ರಷ್ಯಾಕ್ಕೆ ಅಗತ್ಯವಿರುವ ವಸ್ತುಗಳನ್ನು ಯಾವ ರಾಜ್ಯಗಳು ರಫ್ತು ಮಾಡುವವೋ ಅಂಥವಕ್ಕೆ ಅಮೇರಿಕಾ ಸಹಾಯ ನಿರಾಕರಿಸುವ ಶಾಸನಕ್ಕೆ ಅಮೇರಿಕ ಅಧ್ಯಕ್ಷ ಟ್ರೂಮನ್ರವರ ರುಜು ಬಿದ್ದಿತು.

ಮೈಸೂರು ಶಾಸನ ಸಭೆ ನೇಮಿಸಿದ ಪರಿಶೀಲನಾ ಸಮಿತಿ ಶೃಂಗೇರಿ ಜಹಗೀರಿ ಉಳಿಯಲು ವಿನಾಯಿತಿ ಕೊಡಲು ಶಿಫಾರಸು ಮಾಡಿದೆ

ನೀರು ಮಿಶ್ರ ಮಾಡಿದ ಹಾಲು ಮಾರಿದರೆಂದು ಬೆಂಗಳೂರಿನಲ್ಲಿ ಈರ್ವರಿಗೆ ತಲಾ ರೂ. 75 ದಂಡ ವಿಧಿಸಲಾಯಿತು

ಮೈಸೂರು ಸಂಸ್ಥಾನದಲ್ಲಿ ಒಟ್ಟು ಇರುವ ಇನಾಂ ಗಾ ಮಗಳ ಸಂಖೆ ಎರಡು ಸಾವಿರದ ಸೂರು ಇವೆ ಅವುಗಳಿಗೆ ಪರಿಹಾರ ಕೊಡಲು ಬೇಕಾಗುವ ಹಣ ಹಿಂದೂ ಮುಕ್ಕಾಲು ಕೋಟಿ ರೂ

ಮುಂದಿನ ಮಾಹೆ ತಾ॥ 5 ರಲ್ಲಿ ಮುಕ್ಕಳ ದಿನಾಚರಣೆ ನಡೆಸಲು ಸರ್ಕಾರ ಆಜ್ಞೆಯಾಗಿದೆ.

ಮುಂಬರುವ ಮಹಾ ಚುನಾವಣೆಯಲ್ಲಿ ಎಡ ಸಮಾಜವಾದಿ ಪಕ್ಷ ಯಾವ ಅಭ್ಯರ್ಥಿಯನ್ನು ನಿಲ್ಲಿಸುವದಿಲ್ಲ. ಈ ಪಕ್ಷ ಕಮ್ಯುನಿಸ್ಟ್ ಮುಂತಾದ ಮಾರ್ಕ್ಸ್ವಾದಿಗಳಿಗೆ ಬೆಂಬಲಿಸುವದು. ಈ ಅಂಶವನ್ನು ಶ್ರೀಪತಿ ಅರುಣ ಅಸಫಾಲಿ ಮುದರಾಸಿನಲ್ಲಿ ಹೊಂಗೆಸಹಿರವರು

ಮಂಗಳೂರಿನ ಚಿಕಿತ್ಸಾಲಯವೊಂದರಲ್ಲಿ ತಾ॥ 24 ನೇ ಬುಧವಾರ ಮಾಲ ವ್ಯಾಧಿ ಶಸ್ತ್ರಕ್ರಿಯೆಯ ಬಗ್ಗೆ ಕ್ಲೋರೊಫೊರಂ ಅಮಲನ್ನು ಕೊಡಲ್ಪಟ್ಟ ಮಂಗಳೂರು ದೇವನಿಂಗ' ಇಲಾಖಾ ಶ್ರೀ ಕೃಷ್ಣರಾಜ ತಂತ್ರಿಯವರು ಪುನಃ ಜ್ಞಾನ ಬಂದೆ ಮರಣ ಹೊಂದಿದರೆಂದು ತಿಳಿಯುತ್ತದೆ

ಪೂರ್ವ ಪಾಕಿಸ್ತಾನದ ನಾರಾಯಣಗಂಜಿನಲ್ಲಿ ಉಪ್ಪಿನ ಬೆಲೆ ಸೇರಿಗೆ ಹತ್ತೇ ಹತ್ತು ರೂ. ಗಳು ಮಾತ್ರ!

ಮುಂದಿನ ಮಾಹೆ 9 ನೇ ತಾ॥ ನಿಂದ 12 ನೇ ತಾ॥ ವರಿಗೆ ವೈಸೂರಿನಲ್ಲಿ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಅಖಿಲ ಭಾರತ ಟ್ರೈನಿಂಗು ಕಾಲೇಜುಗಳ ಪರಿಷತ್ತು ಸಮಾವೇಶವಾಗುವುದೆಂದು ತಿಳಿದುಬಂದಿದೆ.

ಹಾಸನ ಜಿಲ್ಲೆಯ ಬೇಲೂರಿನಲ್ಲಿ ಕನ್ನಡ ಸಾಹಿತ್ಯ ಸಂಮೇಳನದ 35 ನೇ ಅಧಿವೇಶನ ಸೇರಲಿದೆ.

ಬಲಿಪಾಡ್ಯಮಿ ಪ್ರಯುಕ್ತ ನಾಳೆ ನಮ್ಮ ಪತ್ರಿಕೆ ಮುದ್ರಣವಾಗುವದಿಲ್ಲ

ಉಡ್ಲಾಂಡ್

ಶಿವಮೊಗ್ಗ

2—11—51 ರಿಂದ

— ಅಮೋಘ ಆರಂಭ —

ಐನಾ ಸಿಕ್ಚರ್ಸ್ರವರ

ಸುಮನೋಹರ ಹಿಂದಿ ಚಿತ್ರ

ಗುಮಾನ್ತ

ಪಾತ್ರ— ನಿಗಾರ್, ವಾಸ್ತಿ

ಮಿರ್ಜಾಮುಷ್ತಾಫ್, ಕುಲದೀಪ

ಪ್ರತಿ ದಿನ 3 ಪ್ರದರ್ಶನಗಳು

ಈಗ ಪ್ರದರ್ಶಿತವಾಗುತ್ತಿರುವುದು—

ನೋಕಿ ಔರ್ ಬದಿ

ಸಂಪುಟ ೧೦ ಸಂಚಿಕೆ ೧೦ ॥ ಶ್ರೀ ॥ ತಾ॥ 29-10-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಧರ್ಮ ಮತ್ತು ಭಗವಂತನ ವಿರುದ್ಧ ಚಳವಳಿ

[ಜಿ ಆರ್ ವಹಾಬಲಭಟ್ಟ, ವೇದಾಂತ ಶಿರೋಮಣಿ, ವೇದಾಂತ ವಿಶಾರದ,
ದ್ವಾರಕಾ ಸಂಸ್ಥಾನ, ಮುಳಬಾಗಿಲು ಮಠ]

(ಮುಂದುವರಿದದ್ದು)

ಆದ್ದರಿಂದ ನಾಸ್ತಿಕವಾದವೂ ಕೂಡ ಹೆಚ್ಚಾಗಿ ಒಂದು ಸಂಪ್ರದಾಯವೇ ಆಗಿ ಕಾಣಿತಿದೆ : ಇಂತಹ ಆದು ಈಶ್ವರವಾದವನ್ನು ಸಂಪೂರ್ಣವಾಗಿ ನಾಶಗೊಳಿಸಲು ಸಮರ್ಥವಾಗಲಾರದು. ಎಲ್ಲಾ ಸೇರಿ ಎಷ್ಟೇ ಪ್ರಯತ್ನ ಪಟ್ಟರೂ ಜಗತ್ತೆಲ್ಲವೂ ಮುಸಲ್ಮಾನಮಯ ಅಥವಾ ಈಸಾಯಿ ಮಯವಾಗಿ ಹೇಗೆ ಆಗಲಾರದೋ ಹಾಗೆಯೇ ಇದೂ ಸರಿ. ಆದ್ದರಿಂದ ಮತಭೇದ, ಸಂಪ್ರದಾಯ ಭೇದ, ಧರ್ಮ ಭೇದ, ಅನೈಕ್ಯಗಳೆಲ್ಲವೂ ' ಸಂಸಾರ ' ವೆಂಬ ಹೆಸರಿನ ಒಂದು ವಸ್ತುವಿನ ಧರ್ಮಗಳು ವಿನಃ ಸ್ವಾಭಾವಿಕ ಧರ್ಮಗಳು.

ಯಾವುದಾದರೊಂದು ದೇಶ ಅಥವಾ ಕಾಲದಲ್ಲಿ ಸ್ವಲ್ಪ ಐಕ್ಯವು ಕಾಣಿಸಿದರೆ, ಅದನ್ನು ಈ ಅನೇಕತೆಯ ನಾಶ ಅಥವಾ ಅಭಾವವೆಂದು ತಿಳಿಯುವುದು ತಪ್ಪು : ಅದು ಕೇವಲ ಅನೇಕತೆಗಳ ಪಾರಸ್ಪರಿಕವಾದ ಸಾಮಂಜಸ್ಯವು ; ಅದನ್ನು ನಾವು ಅನೇಕತೆಯ ನಾಶವೆಂದು ತಿಳಿದಿರುತ್ತೇವೆ. ನೀವು ನಮ್ಮದನ್ನು ಸಹಿಸಿರಿ ನಾವು ನಿಮ್ಮದನ್ನು ಸಹಿಸುವೆವು, ನಾವೆಲ್ಲರೂ ಪರಸ್ಪರ ಸೇರಿರೋಣ ಇಂತಹ ಸಾಮಂಜಸ್ಯವನ್ನು ತರುವುದೇ ಸ್ವಾಭಾವಿಕವಾದ ಮತ್ತು ಸರಿಯಾದ ದಾರಿಯಾಗಿದೆ : ಯಾವುದಾದರೂ ಅಥವಾ ಎಲ್ಲಾ ಸಂಪ್ರದಾಯಗಳನ್ನು ನಾಶ ಪಡಿಸುವುದು ಸರಿಯಾದ ದಾರಿಯಲ್ಲವೆಂಬುದು ಮಾತ್ರವಲ್ಲ, ಎಂದೂ ಸಂಭವಿಸುವಂತಹುದೂ ಅಲ್ಲ.

— ಏನು ಈಶ್ವರನಿರುವನೇ? ಇದ್ದರೆ ಏನು? —

ಈಶ್ವರನನ್ನು ಯಾರೂ ತಮ್ಮ ಕಣ್ಣಿನಿಂದ ನೋಡಿಲ್ಲ. ಆದ್ದರಿಂದ ಈಶ್ವರನಿಲ್ಲ, ಎಂದು ಅನೀಶ್ವರವಾದಿಗಳು ತರ್ಕಿಸುತ್ತಾರೆ ಯಾರು ಯಾವುದನ್ನು ತನ್ನ ಜ್ಞಾನೇಂದ್ರಿಯದಿಂದ ನೋಡುತ್ತಾರೆಯೋ, ಅದೇ ವಸ್ತುವೆಂದು ಅನೀಶ್ವರವಾದಿಗಳು ಒಪ್ಪಿರುವಂತೆ ತೋರುತ್ತದೆ ; ಯಾವ ಅನೀಶ್ವರವಾದಿಯು ಈ ತರ್ಕವನ್ನು ಮಾಡುತ್ತಾನೆಯೋ, ಅವನು ಜ್ಞಾನೇಂದ್ರಿಯಗಳನ್ನೇ ನಾಕ್ಸಿಯಾಗಿ ಒಪ್ಪುತ್ತಾನೆ ; ನಿರ್ಗುಣ, ನಿರಾಕಾರ, ಅಗೋಚರವಾದ ಸತ್ಯವನ್ನು ಅವನು ಒಪ್ಪುವುದಿಲ್ಲ ಎಂಬ ಅಭಿಪ್ರಾಯವು ಇದರಿಂದ ಹೊರಡುತ್ತದೆ : ಆದರೆ ಅವನು ಆದರ್ಶಪುರುಷನನ್ನು ಅತ್ಯವಶ್ಯವಾಗಿ ಒಪ್ಪುವನು. ಆರ್ಯ, ತೀರ್ಥಂಕರ, ರಾಮ, ಕೃಷ್ಣ, ಋಷಿ ಮಹರ್ಷಿ ಮುಂತಾದ ಗೋಚರಾಗಿರುವವನ್ನು ಅವನು ಒಪ್ಪುತ್ತಾನೆ : ತಾನು ಅನೀಶ್ವರವಾದಿಯೆಂದು ಯಾರು ಹೇಳಿಕೊಳ್ಳುವುದಿಲ್ಲವೋ, ಇವರನ್ನು ಬಹಳ ಜನಗಳು ಒಪ್ಪುತ್ತಾರೆ ; ಅವರು ಇವರನ್ನು ಒಳ್ಳೆಯ ಮತ್ತು ಆದರ್ಶಪುರುಷರ ನ್ನಾಗಿಟ್ಟುಕೊಂಡೇ ಒಪ್ಪಿರಲಿ, ಆದರೂ ಒಪ್ಪುತ್ತಾರಷ್ಟೆ ಈಶ್ವರ ಶಬ್ದಕ್ಕೆ ಅರ್ಥವನ್ನು ಅನೀಶ್ವರವಾದಿಯು ' ಅಗೋಚರ ' ವೆಂದು ತಿಳಿದಿರುತ್ತಾನೆ : ಇವೆಲ್ಲವೂ ಬ್ರಹ್ಮವೆಂಬ ಮಹಾವಾಕ್ಯವನ್ನು ಹೇಳುತ್ತಿರುವ ಉದ್ವೈತ ವೇದಾಂತಿಯು ಈ ಜಗತ್ತನ್ನೇ ಬ್ರಹ್ಮವೆಂದೊಪ್ಪುತ್ತಾನೆ ; ಅವನು ಸಮಷ್ಟಿಯನ್ನು ಈಶ್ವರನೆಂದೊಪ್ಪುತ್ತಾನೆ. ಮತ್ತು ಸಮಷ್ಟಿಯು ಗೋಚರವಾದರೆ ಅನೀಶ್ವರವಾದಿಗೂ, ಅವನಿಗೂ ಯಾವ ಜಗಳವೂ ಇಲ್ಲ

' ಈಶ್ವರ ' ಶಬ್ದದ ಪ್ರಯೋಗವನ್ನು ಎಲ್ಲಾ ಈಶ್ವರವಾದಿಗಳೂ ಒಂದೇ ಅರ್ಥದಲ್ಲಿ ಮಾಡುವುದಿಲ್ಲ ; ಅನೀಶ್ವರವಾದಿಯು ಮಾತ್ರ ' ಗೋಚರತೆ ' ಯನ್ನು ಸತ್ಯವು ಅನಿವಾರ್ಯ ಗುಣವೆಂದೊಪ್ಪಿ, ಈಶ್ವರನಿಲ್ಲದೇಹೋದರೆ ನಮಗೂ ಅವನಿಗೂ ಯಾವ ಜಗಳವೂ ಇಲ್ಲವೆಂದು ಹೇಳುತ್ತಾನೆ. ಸತ್ಯವು ಗೋಚರ ಮತ್ತು ಅಗೋಚರ ಎರಡೂ ಇವೆಯೆಂದು ವೈಜ್ಞಾನಿಕನು ತಿಳಿಯುತ್ತಾನೆ, ಆದರೆ ಅವೈಜ್ಞಾನಿಕನು ಕೇವಲ ಗೋಚರವಾದ ಸತ್ಯವನ್ನೇನೆಯೇ ತಿಳಿಯುತ್ತಾನೆ : ಹೀಗಿರಲು ಎರಡು ಪಕ್ಷಗಳಲ್ಲಿ ಜಗಳವು ಯಾವ ನಾತಿಗಾಗಿ ? ಒಬ್ಬನು ತಿಳಿಯುತ್ತಾನೆ, ಇನ್ನೊಬ್ಬನು ತಿಳಿಯುವುದಿಲ್ಲ, ಇಷ್ಟೇ ವೈತ್ಯಾಸವಿರುವುದು ; ಅವಿಜ್ಞಾನಿಕನಿಗೆ ತಿಳಿಯುವ ಯೋಗ್ಯತೆ ಬಂದರೆ, ಅವನೂ ತಿಳಿಯಬಹುದು.

ಈಶ್ವರನನ್ನು ಯಾರೂ ನೋಡದಿರುವುದರಿಂದ, ಈಶ್ವರನು ಇಲ್ಲ ಎಂದು ಅನೀಶ್ವರವಾದಿಯು ಹೇಳುತ್ತಾನೆ ಪರಮಾಣುವನ್ನು ಯಾರೂ ನೋಡದಿರುವುದರಿಂದ ಪರಮಾಣುವಿಲ್ಲ, ಆಕಾಶವನ್ನು ಯಾರೂ ನೋಡದಿರುವುದರಿಂದ ಆಕಾಶವಿಲ್ಲ. ಆತ್ಮನನ್ನು ಯಾರೂ ನೋಡದಿರುವುದರಿಂದ ಆತ್ಮನಿಲ್ಲ ; ಇವೆಲ್ಲವೂ ಚಾರ್ವಾಕನ ಊಹೆಗಳು. ಏನೀ ತರ್ಕಗಳಿಗೆ ಸೂರಾರು ಬಾರಿ ಖಂಡನೆಗಳಾಗಲಿಲ್ಲವೇ ? ಹೌದು. ಇದನ್ನು ಎಲ್ಲರೂ ತಿಳಿದಿಲ್ಲವೆಂದು ಹೇಳಬಹುದು, ಆದರೆ ಆ ಮಾತು ಬೇರೆ. ಈಶ್ವರವಾದಿಯೂ ಯಾವಬಳಿಯಲ್ಲಿಯೂ ' ನಿನಗೆ ವಿಶ್ವಾಸವಿಲ್ಲದಿದ್ದರೂ ಈಶ್ವರನನ್ನು ನಂಬು ' ಎಂದು ಹೇಳುವುದಿಲ್ಲ

ವಾಸ್ತವಿಕವಾದ ಸತ್ಯವು ಎಷ್ಟಿರುವುದೋ, ಅದರ ಅತ್ಯಂತ ಅಲ್ಪಾಂಶವು ನಮಗೆ ಗೋಚರವಾಗುವುದು. ಕಣ್ಣುಗಳು ಕೆಲವು ಪರಿಮಿತವಾದ ತರಂಗಗಳನ್ನೇ ಕೇಳಲು ಶಕ್ತವಾಗಿವೆ ; ನಾಲಿಗೆಯು ಕೆಲವು ಪರಿಮಿತವಾದ ರಸವನ್ನೇ ರುಚಿನೋಡಬಲ್ಲದು : ಮೂಗು ಪರಿಮಿತವಾದ ಗಂಧವನ್ನೇ ಮೂಸಬಲ್ಲುದು : ತ್ವಗಿಂದ್ರಿಯವೂ ಪರಿಮಿತವಾದ ಸ್ಪರ್ಶವನ್ನೇ ಗ್ರಹಿಸುವುದು ; ಭಾರ, ಆಕರ್ಷಣ, ವಿದ್ಯುತ್ ಅನಂತ ಪ್ರಕಾಶದ ವಿದ್ಯುತ್, ಮತ್ತು ಇತರ ತರಂಗ ಇವುಗಳ ಅನುಭವವನ್ನು ಮಾತ್ರ ವಸ್ತುಸ್ಥಿತಿಯೆಂದೊಪ್ಪಬಹುದು : ಸತ್ಯವು ಅನಂತ ರಾಶಿಯಾದರೋ ಅಸ್ಪೃಶ್ಯವಾಗಿಯೇ ಇರುವುದು ; ನಮ್ಮ ಇಂದ್ರಿಯಗಳು ಆ ಅನಂತರಾಶಿಯ ಮೇಲಿನ ತಳವನ್ನೂ ಕೂಡ ಮುಟ್ಟಲಾರವು. ಕೇವಲ ಅದರ ಅತ್ಯಂತ ಸೂಕ್ಷ್ಮ ಪ್ರಮಾಣವನ್ನು ಹೊಂದುವುದು ವಿಜ್ಞಾನದ ನಿಷ್ಕರ್ಷವೇ ಇದು, ಆದ್ದರಿಂದ ಅಗೋಚರವಾದುದು ಇಲ್ಲವೇ ಇಲ್ಲವೆಂದು ಹೇಳುವುದು ಅವೈಜ್ಞಾನಿಕಂ ಮಾತೇ ಸರಿ ; ಅಗೋಚರವಾದ ಸತ್ಯವು ಅನಂತವಾದುದು : ಇದೇ ಅನಂತ ಸತ್ಯವನ್ನು ಈಶ್ವರನೆಂದು ಯಾರಾದರೂ ಒಪ್ಪುವುದಾದರೆ ಅದು ಸಂಗತವೆನಿಸಲಾರದು : ಕುರುಡರು ಆನೆಯ ಬೇರೆಬೇರೆ ಅಂಗಗಳನ್ನೇ ಸಂಪೂರ್ಣವಾದ ಆನೆಯನ್ನಾಗಿ ತಿಳಿದಂತೆ, ಕೇವಲ ಅಗೋಚರವಾದ ಸತ್ಯವನ್ನು ಈಶ್ವರನೆಂದೊಪ್ಪುವುದು ಕೇವಲ ಒಂದು ಅಂಗವನ್ನೇ ಪೂರ್ಣ ಈಶ್ವರನೆಂದೊಪ್ಪುವವನು ಕೇವಲ ಒಂದು ಅಂಗನನ್ನೇ ಪೂರ್ಣ ಈಶ್ವರನೆಂದೊಪ್ಪತಕ್ಕವನಾಗುವನು.

[ಮುಂದುವರಿಯುವುದು

ಶ್ರೀ ಜಗದ್ಗುರುಗಳವರಿಗೆ ವೈಭವದ ಸ್ವಾಗತ

[ಸ್ವಂ ಸು ತಂತಿ] ಬಿಲಾಸಿನಾರ್, ಅ 22

ಡಾಕೋಟಿನಲ್ಲಿ ಶ್ರೀ ದ್ವಾರಕಾ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರಿಗೆ ಬಹಿರಂಗ ಸಭೆಯಲ್ಲಿ ವೈಭವಯುತ ಬೀಳ್ಕೊಡುವಿಕೆ ಕೊಡಲಾಯಿತು. ಅನೇಕ ಪಂಡಿತರು ಮತ್ತು ಧರ್ಮಿಣರು ಶ್ರೀ ಶ್ರೀಗಳವರಿಗೆ ಗೌರವ ಸಲ್ಲಿಸಿದರು ಅದಕ್ಕೆ ಪ್ರತಿಯಾಗಿ ಶ್ರೀ ಜಗದ್ಗುರುಗಳವರು ಕೆಲವು ಧುರೀಣರಿಗೆ ರಜತ ಪದಕವನ್ನೂ, ಆಶೀರ್ವಾದವನ್ನೂ ಕೃಪೆ ಮಾಡಿದರು ಸಂಪೂರ್ಣ ಉತ್ಸಾಹದಿಂದ, ನಿನ್ನೆ ಶ್ರೀ ಶ್ರೀಗಳವರು ಬಿಲಾಸಿನಾರ್‌ಗೆ ಆಗಮಿಸಿದಾಗ ವೈಭವದ ಸ್ವಾಗತ ದೊರೆಯಿತು. ದೇಶದ ಸಾಂಸ್ಕೃತಿಕ ಅಭಿವೃದ್ಧಿ ಕುರಿತು ನಾನಾ ವಿಷಯಗಳ ಮೇಲೆ ಶ್ರೀ ಶ್ರೀಗಳವರು ಉಪನ್ಯಾಸ ಪ್ರವಚಿಂಭಿಸಿದರು.

Edited, Printed and Published by Dharma Prachara Nirata M. S. Krishna Rao. at the Satyavadi Press, Chamrajpuram Mysore